1773

ಕೋಲ್ಲಾರ ಡಿಸ್ಟ್ರಿಕ್ಟು.

ತಾರೀಖು 2ನೆ ನವಂಬರ್ 1904ನೆ ಇಸವಿ.

ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾವುಗಳು, ಸರ್ಕಾರಕ್ಕೆ ಬರಬೇಕಾದ ಬಾಕೀ ಮೊಬಲಗಿಗೋಸ್ಕರ ವಾಗಿ, ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1904ನೆ ಇಸವಿ ಡಿಸೆಂಬರ್ ಮಾಹೆ 15ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

1. ಜೋಡಿ ವಡಗೂರು-ಹುತ್ತೂರು ಹೋಬಳಿ—ಕೋಲಾರ ತಾಲ್ಲೂಕು.
2. ಜೋಡಿ ದಂಡಿಗಾನಹಳ್ಳಿ-ವಕ್ಕಲೇರಿ ಹೋಬಳಿ—ಕೋಲಾರ ತಾಲ್ಲೂಕು.
3. ಜೋಡಿ ದೊಡ್ಡಗಾಂಡ್ಲಹಳ್ಳಿ-ಕ್ಯಾಸಂಬಳ್ಳಿ ಹೋಬಳಿ—ಬವರಿಂಗ್‌ಪೇಟೆ ತಾಲ್ಲೂಕು.

(ಹೆಚ್ಚು ತಪಶೀಲ್ ಬಗ್ಯೆ 1904ನೆ ಮಾರ್ಚ್ಕಂ 45ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 619-620-621-622ನೆ ನಂಬರು ಪೇಜು ನೋಡತಕ್ಕದ್ದು.)

ಕೆ. ಏ. ಪುಟ್ಟಣ್ಣ ಚೆಟ್ಟಿ,
ಡೆಪ್ಯುಟಿ ಕಮಿಷನರ್.

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1904—1905ನೆ ಇಸವಿ ಮಿ॥ ಅರ್ಜೀ ನಂಬರ್ 149.

ಮೃತಪಟ್ಟ ಶಿವನೊಗ್ಗ ಡೆಪ್ಯುಟಿ ಕನ್ಸರ್ವೇಟರಾಗಿದ್ದ ವೆಂಕಟನಾರಣಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಎಡತೊರೆ ತಾಲ್ಲೂಕು ಮಂಚನಹಳ್ಳಿ ವಾಸಸ್ಥ ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕನ್ಸರ್ವೇಟರ್ ವೆಂಕಟನಾರಣಪ್ಪನವರ ಮಗ ವೆಂಕಟಕೃಷ್ಣಪ್ಪ, ಮೃತಪಟ್ಟ ಸದರಿ ವೆಂಕಟನಾರಣಪ್ಪ ಎಂಬುವರಿಗೆ ಸ್ವೀಕೃತಪುತ್ರ ಆಗಬೇಕೆಂಬ ಹಕ್ಕುದಾರಿಯು ಮೇಲೆ ಮೇಲ್ಕಂಡ ಅರ್ಜೆದಾರ್ ವೆಂಕಟಕೃಷ್ಣಪ್ಪ ಎಂಬುವರು ಎಡತೊರೆ ತಾಲ್ಲೂಕು ಮಂಚನಹಳ್ಳಿ ವಾಸಸ್ಥರಾಗಿ ಮೃತಪಟ್ಟ ವೆಂಕಟನಾರಣಪ್ಪ ಎಂಬುವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಕೃಷ್ಣಪ್ಪ ಎಂಬುವರ ಅರ್ಜಿಯನ್ನು ಸನ್ 1905ನೆ ಇಸವಿ ಜನವರಿ ತಿಂಗಳು ತಾರೀಖು 10 ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವರ್ಕ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟನಾರಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ನವಂಬರು ತಿಂಗಳು 17ನೆ ತಾರೀಖಿನಲ್ಲಿ ಕೋರ್ಟರ್ ಮೊಹರಿನಿಂ ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1904—1905ನೆ ಇಸವಿ ಮಿ॥ ಅರ್ಜೀ ನಂಬರ್ 170.

ಮೃತಪಟ್ಟ ಎಂ. ಎ. ತಿರುನಾರಣಾಚಾರ್ರ ಆಸ್ತೀ ವಿಷಯದಲ್ಲಿ —

ಅರ್ಜೀದಾರ್ರು ಎಂ. ಎ. ಶಿಂಗ್ರೈಯ್ಯಂಗಾರ್ರು, ಮೃತಪಟ್ಟ ಸದರೀ ಎಂ. ಎ. ತಿರುನಾರಣಾಚಾರ್ರಿಗೆ ಖಾಸಾ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹಾಲಿ ಬಂಗಳೂರು ವಾಸಸ್ಥರಾದ ಮೇಲ್ಕಂಡ ಎಂ. ಎ. ಶಿಂಗ್ರೈಯ್ಯಂಗಾರ್ರು ಮೈಸೂರು ವಾಸಸ್ಥರಾಗಿ ಮೃತಪಟ್ಟ ಎಂ. ಎ. ತಿರುನಾರಣಾಚಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಎಂ. ಎ. ಶಿಂಗ್ರೈಯ್ಯಂಗಾರ್ರು ಎಂಬುವರ ಅರ್ಜಿಯನ್ನು ಸನ್ 1905ನೆ ಇಸವಿ ಜನವರಿ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎಂ. ಎ. ತಿರುನಾರಣಾಚಾರ್ಯರ ಆಸ್ತಿಗೆ ಹಕ್ಕುದಾರರಾದ ವಿಸಪ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ನವಂಬರ ತಿಂಗಳು 17ನೆ ತಾರೀಖಿನಲ್ಲಿ ಕೋರ್ಟರ್ ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1904—1905ನೆ ಇಸವಿ ಮಿ॥ ಅರ್ಜೀ ನಂಬರ್ 171.

ಮೃತಪಟ್ಟ ವೆಂಕಟಮ್ಮ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1. ಮೈಸೂರು ಚಾಮರಾಜಪೇಟೇಲಿರುವ ಕಾಳ ವೆಂಕಟಪ್ಪನವರ ಮಗ ಕಾಳ ರಾಮಯ್ಯ, 2. ಬಂಗಳೂರು ಬಿನವನಗುಡಿ ಎಕ್ಸ್‌ಟೆರ್ಷನ್ನಲ್ಲಿರುವ 1ನೆ ಅರ್ಜೆದಾರ್ರ ಅಂಣ ಕಾಳಸುಬ್ಬಯ್ಯ ಮೃತಪಟ್ಟ ಸದರೀ ವೆಂಕಟಮ್ಮ ಎಂಬುವರಿಗೆ ವಿಭಕ್ತ ಮೈದುಂದರು ಆಗಬೇಕೆಂಬ ಹಕ್ಕುದಾರಿ ಮೇಲೆ 1ನೆ ಕಾಳರಾಮಯ್ಯ, 2ನೆ ಕಾಳಸುಬ್ಬಯ್ಯ ಎಂಬವರು ಮೈಸೂರು ವಾಸಸ್ಥರಾಗಿ ಮೃತಪಟ್ಟ ವೆಂಕಟಮ್ಮ ಎಂಬವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷ್ಷ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.